**ದಿನಾಂಕ 04.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 4 ರಿಂದ 7 ನೇ ಪ್ರತಿವಾದಿಗಳ ಪರ: ಶ್ರೀ. ಎಂ.ಎಸ್,ಹೆಚ್. ವಕೀಲರಿಂದಃ–**

ನಾಗಪ್ಪ ಬಿನ್ ಸಿದ್ದಪ್ಪ ಯಾರು ಎಂದು ನನಗೆ ಗೊತ್ತಿಲ್ಲ. ಇ.ತಿಮ್ಮಾಪುರ ಗ್ರಾಮದ ಸರ್ವೆ ನಂ.37 ರ ಪೈಕಿ ನಾಗಪ್ಪ ಬಿನ್ ಸಿದ್ದಪ್ಪ ಎಂದು ಪಹಣಿಯಲ್ಲಿ ನಮೂದಾಗಿದ್ದು, ಸದರಿಯವರು ಯಾರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರು ನನ್ನ ಅಣ್ಣ–ತಮ್ಮಂದಿರಾಗಿರಬೇಕು, ಅವರುಗಳು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಂಜುಂಡಪ್ಪ ಬಿನ್ ನಾಗಾಪ್ಪ ಯಾರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರು ನನ್ನ ಅಣ್ಣ–ತಮ್ಮಂದಿರಾಗಿರಬೇಕು, ಅವರುಗಳು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಏಕೆಂದರೆ ನಾನು ಊರಿನಲ್ಲಿ ಇರುವುದಿಲ್ಲ, ಆದ್ದರಿಂದ ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ಸರ್ವೆ ನಂಬರಿನಲ್ಲಿರುವ ತಿಮ್ಮಪ್ಪ ಬಿನ್ ನಂಜಪ್ಪ ಎಂದರೆ ಅವರು ನಮ್ಮ ಕುಟುಂಬದವರಾಗಿರುತ್ತಾರೆ. ಅದೇ ಸರ್ವೆ ನಂಬರಿನಲ್ಲಿರುವ ನಂಜುಂಡಪ್ಪ ಬಿನ್ ವೆಂಕಟಪ್ಪ ಎಂದರೆ ಅವರು ನಮ್ಮ ಕುಟುಂಬದವರಾಗಿರುತ್ತಾರೆ. ಅದೇ ಸರ್ವೆ ನಂಬರಿನಲ್ಲಿರುವ ರಾಮಣ್ಣ ಬಿನ್ ತಿಮ್ಮಣ್ಣ ಎಂದರೆ ಅವರು ನಮ್ಮ ಕುಟುಂಬದವರಾಗಿರುತ್ತಾರೆ. ಅದೇ ಸರ್ವೆ ನಂಬರಿನಲ್ಲಿರುವ 1 ನೇ ಪ್ರತಿವಾದಿಯಾದ ನಂಜುಂಡಪ್ಪ ಬಿನ್ ಮೂಡ್ಲಪ್ಪ ನನ್ನ ದೊಡ್ಡಪ್ಪನಾಗಬೇಕು. 1 ನೇ ಪ್ರತಿವಾದಿಯು ನಮ್ಮ ಒಟ್ಟು ಕುಟುಂಬದ ಸದಸ್ಯರಾಗಿರುತ್ತಾರೆ.

ಲಕ್ಷ್ಮಮ್ಮ, ಪಾರ್ವತಮ್ಮ, ಚಂದ್ರಮ್ಮ ಅಂದರೆ 8 ರಿಂದ 10 ನೇ ಪ್ರತಿವಾದಿಗಳು ನನ್ನ ಅತ್ತೆಯಂದಿರಾಗಬೇಕು. ಸದರಿಯವರು ಸಹ ನಮ್ಮ ಒಟ್ಟು ಕುಟುಂಬದ ಸದಸ್ಯರಾಗಿರುತ್ತಾರೆ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತದೆ. 8 ರಿಂದ 10 ನೇ ಪ್ರತಿವಾದಿಗಳು ನಮ್ಮ ಒಟ್ಟು ಕುಟುಂಬದ ಸದಸ್ಯರು ಎಂದು ತೋರಿಸಲು ವಂಶವೃಕ್ಷವನ್ನು ನಾನು ಹಾಜರುಪಡಿಸಿರುತ್ತೇನೆ. ನ್ಯಾಯಾಲಯದಲ್ಲಿ ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ ಎಂದರೆ, ಸಾಕ್ಷಿಯು ನಾನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ಯಾಗಪ್ಪ ನನ್ನ ಅಜ್ಜನಾಗಬೇಕು. ಯಾಗಪ್ಪನ ಸಹೋದರ ಮೂಡ್ಲಪ್ಪ ಎಂಬುವವರು ಇದ್ದರು ಎಂದರೆ ಸರಿಯಲ್ಲ. ಸದರಿ ಮೂಡ್ಲಪ್ಪನವರಿಗೆ ನಾಗಪ್ಪ ಎಂಬ ಮಗನಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಯಾಗಪ್ಪನವರಿಗೆ ನಾಗಪ್ಪ ಎಂಬ ಸಹೋದರ

ಇದ್ದರು ಎಂದು ನುಡಿಯುತ್ತಾರೆ. ದಾವಾ ಆಸ್ತಿ ಐಟಂ ನಂ.1 ಸರ್ವೆ ನಂ.37 ಮೂಡ್ಲಪ್ಪನ ಮಗ ನಾಗಪ್ಪರವರ ಹೆಸರಿಗೆ ಇತ್ತು ಎಂದರೆ, ಸಾಕ್ಷಿಯು ನನ್ನ ಹಳೆ ವಂಶದವರ ಬಗ್ಗೆ ನನಗೆ ಅಷ್ಟು ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಮೂಡ್ಲಪ್ಪನವರಿಗೆ ಒಟ್ಟು 05 ಜನ ಮಕ್ಕಳಿದ್ದರು. ಮೊದಲನೆಯವರು ಲಕ್ಷ್ಮಮ್ಮ, ಎರಡನೇ ನಂಜುಂಡಪ್ಪ, ಮೂರನೇ ನಾಗಪ್ಪ, ನಾಲ್ಕನೇ ಪಾರ್ವತಮ್ಮ, ಐದನೇ ಚಂದ್ರಮ್ಮ ಆಗಿರುತ್ತಾರೆ. ಯಾಗಪ್ಪನವರು ನನ್ನ ಅಜ್ಜನ ತಂದೆಯಾಗಿರುತ್ತಾರೆ, ಅಂದರೆ ನನ್ನ ಮುತ್ತಾತನವರಾಗಿರುತ್ತಾರೆ. ಯಾಗಪ್ಪನವರಿಗೆ ಒಟ್ಟು 03 ಜನ ಮಕ್ಕಳು. ಅವರುಗಳೆಂದರೆ ಮೂಡ್ಲಪ್ಪ, ತಿಮ್ಮಪ್ಪ, ಸಿದ್ದಪ್ಪ ಆಗಿರುತ್ತಾರೆ.

ವೈ.ತಿಮ್ಮಪ್ಪನವರು ನನಗೆ ಗೊತ್ತು. ಸದರಿಯವರು ನನ್ನ ಅಜ್ಜನಾದ ಮೂಡ್ಲಪ್ಪನವರ ತಮ್ಮನಾಗಿರುತ್ತಾರೆ. ಸಿದ್ದಪ್ಪನವರು ಸಹ ಮೂಡ್ಲಪ್ಪನವರ ತಮ್ಮನಾಗಿರುತ್ತಾರೆ. ಯಾಗಪ್ಪನವರ ಮೂರು ಜನರ ಮಕ್ಕಳ ನಡುವೆ 1975ರಲ್ಲೇ ವಿಭಾಗವಾಗಿರುತ್ತದೆ. ಸದರಿ ಮೂರು ಜನರಲ್ಲಿ ಯಾವ–ಯಾವ ಆಸ್ತಿಗಳು ಅವರಗಳ ಹಿಸ್ಸೆಗೆ ಬಂದಿರುತ್ತವೆ ಎಂದು ಸಾಕ್ಷಿಯು ನನ್ನ ಅಜ್ಜನಾದ ಮೂಡ್ಲಪ್ಪನವರ ಹಿಸ್ಸೆಗೆ ಬಂದ ಸ್ವತ್ತುಗಳ ಬಗ್ಗೆ ಮಾತ್ರ ನನಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ವೈ.ತಿಮ್ಮಪ್ಪನವರಿಗೆ ವಿಭಾಗದಲ್ಲಿ ಯಾವ ಆಸ್ತಿಗಳು ಬಂದಿದ್ದವು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ 4 ರಿಂದ 7ರವರು ಏನು ತಕರಾರನ್ನು ಸಲ್ಲಿಸಿರುತ್ತಾರೆ ಎಂದು ನನಗೆ ತಿಳಿದಿರುತ್ತದೆ. ಪ್ರತಿವಾದಿ 4 ರಿಂದ 7ರವರಿಗೂ, ನಾನು ಸಲ್ಲಿಸಿರುವ ದಾವಾ ಆಸ್ತಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ. ದಾವಾ ಆಸ್ತಿಗಳು ನನ್ನ ಅಜ್ಜನ ಹಿಸ್ಸೆಗೆ ಬಂದಿರುತ್ತವೆ ಎಂದು ತೋರಿಸಲು ನಾನು ಪಹಣಿಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಗಳು ನನ್ನ ಅಜ್ಜನ ಹಿಸ್ಸೆಗೆ ಬಂದಿರುತ್ತವೆ ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ, ಆದರೆ ಬಾಯಿ ಮಾತಿನ ಮೂಲಕ ವಿಭಾಗ ಮಾಡಿಕೊಂಡಿದ್ದು ಸ್ವಾಧೀನದಂತೆ ಪಹಣಿಗಳು ನಮ್ಮ ಹೆಸರಿಗೆ ಇರುತ್ತವೆ ಎಂದು ನುಡಿಯುತ್ತಾರೆ. ನಮ್ಮ ಹೆಸರಿಗೆ ಪಹಣಿಗಳು ಬರಬೇಕಾದರೆ ಯಾವ ಆಧಾರದ ಮೇರೆಗೆ ಬಂದಿರುತ್ತವೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಬಾಯಿ ಮಾತಿನ ಮೂಲಕ ವಿಭಾಗವಾದಂತೆ ಸ್ವಾಧೀನದಲ್ಲಿದ್ದು ಅದರಂತೆ ಪಹಣಿಗಳು ನಮ್ಮ ಹೆಸರಿಗೆ ಬಂದಿರುತ್ತವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಪಹಣಿಗಳನ್ನು ಹೊರತುಪಡಿಸಿ ಎಂ.ಆರ್.ಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಿಪಿ.10ರಂತೆ ಐಎನ್.ಹೆಚ್. ವಹಿಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

4 ನೇ ಪ್ರತಿವಾದಿಯ ದೊಡ್ಡಪ್ಪ ಗವಿಸಿದ್ದಪ್ಪನವರು ನನಗೆ ಗೊತ್ತು. ವೈ.ತಿಮ್ಮಪ್ಪನವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ನಮ್ಮ ಒಟ್ಟು ಕುಟುಂಬದ ಪಕ್ಷಗಾರರಾಗಿರುವುದಿಲ್ಲ, ಅವರ ಕುಟುಂಬ ಬೇರೆ ಆಗಿರುತ್ತದೆ, ನಾನು ನಮ್ಮ ಕುಟುಂಬದ ಆಸ್ತಿಗಳಿಗೆ ಮಾತ್ರ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಮೂಡ್ಲಪ್ಪ, ತಿಮ್ಮಪ್ಪ, ಸಿದ್ದಪ್ಪ ನನ್ನ ಅಜ್ಜಂದಿರಾಗಿದ್ದು ಅವರಿಗೆ ಸರ್ವೆ ನಂ.37 ರಲ್ಲಿ ಇರುವ ಆಸ್ತಿಗಳನ್ನು ಹೊರತುಪಡಿಸಿ ಸರ್ವೆ ನಂ.37 ರಲ್ಲಿ ಇತರರಿಗೆ ಆಸ್ತಿಗಳು ನಮ್ಮ ಅಣ್ಣ-ತಮ್ಮಂದಿರಿಗೆ ಇರುತ್ತವೆ, ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸರ್ವೆ ನಂ.37 ರಲ್ಲಿ ಯಾರು-ಯಾರಿಗೆ ಹಿಸ್ಸೆ ಆಗಿರುತ್ತದೆ ಎಂದು ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ನನ್ನ ಅಜ್ಜ ಮೂಡ್ಲಪ್ಪನವರು ಹೆಬ್ಬಿಟ್ಟಿನ ಗುರುತನ್ನು ಹಾಕುತ್ತಿದ್ದರು, ಸಹಿಯನ್ನು ಮಾಡುತ್ತಿರಲಿಲ್ಲ. ನಾವು ಹಾಜರುಪಡಿಸಿರುವ ದಾವಾ ಆಸ್ತಿ 1 ಕ್ಕೆ ಸಂಬಂಧಿಸಿದಂತೆ ದಿನಾಂಕ 21.05.1975 ರ ಮೂಲ ಕ್ರಯಪತ್ರವನ್ನು ನಾನು ನೋಡಿ ತಿಳಿದುಕೊಂಡಿರುವುದಿಲ್ಲ. ಸದರಿ ದಾಖಲೆಯಂತೆ ವೈ.ತಿಮ್ಮಪ್ಪನವರು ಗವಿಸಿದ್ದಪ್ಪನವರಿಗೆ ದಾವಾ ಆಸ್ತಿ 1 ರಲ್ಲಿ 37 ಗುಂಟೆಯನ್ನು ಮಾರಾಟ ಮಾಡಿರುತ್ತಾರೆ ಎಂದರೆ, ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುತಿಯುತ್ತಾರೆ. ಗವಿಸಿದ್ದಪ್ಪನವರ ತಮ್ಮನ ಮಗನೇ 4 ನೇ ಪ್ರತಿವಾದಿ ಮಲ್ಲೇಶಪ್ಪ ಆಗಿರುತ್ತಾರೆ ಎಂದರೆ ಸರಿ. ಸದರಿ ಪತ್ರಕ್ಕೆ ನನ್ನ ಅಜ್ಜ ಮೂಡ್ಲಪ್ಪನವರು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ವೈ.ತಿಮ್ಮಪ್ಪನವರಿಗೆ ಮಾರಾಟ ಮಾಡಲು ನನ್ನ ಅಜ್ಜ ಮೂಡ್ಲಪ್ಪನವರು ಒಪ್ಪಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಗವಿಸಿದ್ದಪ್ಪನವರಿಗೆ ಕ್ರಯವಾದ ನಂತರ ಅವರು ತಮ್ಮ ಹೆಸರಿಗೆ ಖಾತೆಯನ್ನು ಮಾಡಿಸಿಕೊಳ್ಳದೇ ಇದ್ದುದ್ದರಿಂದ ಅದನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಚಕ್ಕುಬಂದಿ ಪೂರ್ವಕ್ಕೆ- ಸಿದ್ದಣ್ಣನ ಮಗ ರುದ್ರಪ್ಪನ ಜಮೀನು, ಪಶ್ಚಿಮಕ್ಕೆ - ಪೂಜಾರಿ ಮಲ್ಲಪ್ಪನವರ ಜಮೀನು, ದಕ್ಷಿಣಕ್ಕೆ - ವೆಂಕಟಪ್ಪನವರ ಮಗ ನಂಜುಂಡಪ್ಪನವರ ಹಿಸ್ಸೆ ಜಮೀನು, ಉತ್ತರಕ್ಕೆ - ನನ್ನ ಖಾಸ ಅಣ್ಣ ಮೂಡ್ಲಪ್ಪನವರ ಹಿಸ್ಸೆಯ ಜಮೀನು ಎಂದು ಚಕ್ಕುಬಂದಿ ಇರುವ ಜಮೀನು ನಿಮಗೆ ಸಂಬಂಧಪಟ್ಟಿದ್ದೋ ಇಲ್ಲವೋ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಚಕ್ಕುಬಂದಿ ನಮಗೆ ಸಂಬಂದಪಟ್ಟಿದ್ದು ಎಂದು

ಉತ್ತರಿಸಿರುತ್ತಾರೆ. ಸದರಿ ಚಕ್ಕುಬಂದಿಯ ಸ್ವತ್ತು ನನ್ನ ಅಜ್ಜನ ಹಿಸ್ಸೆಗೆ ಬಂದ ಸ್ವತ್ತಾಗಿರುತ್ತದೆ. ಸದರಿ ಸ್ವತ್ತು ನನ್ನ ಅಜ್ಜನ ಹಿಸ್ಸೆಗೆ ಬಂದಿದ್ದು ಎಂದು ತೋರಿಸಲು ನನ್ನ ಬಳಿ ಲಿಖಿತ ದಾಖಲೆ ಇರುವುದಿಲ್ಲ. ಸಾಕ್ಷಿ ಮುಂದುವರೆದು ಬಾಯಿ ಮೂಲಕ ವಿಭಾಗ ಮಾಡಿಕೊಳ್ಳಲಾಗಿರುತ್ತದೆ ಎಂದು ನುಡಿಯುತ್ತಾರೆ. ಐಟಂ ನಂ.1ರಲ್ಲಿ ನನ್ನ ತಾತನ ಹಿಸ್ಸೆಗೆ ಬಂದ ಚಕ್ಕುಬಂದಿ ಪೂರ್ವಕ್ಕೆ-ರಸ್ತೆ, ಉತ್ತರಕ್ಕೆ-ಕುಂಟಪ್ಪ ಸಿದ್ದಪ್ಪನವರ ಜಮೀನು, ಪಶ್ಚಿಮಕ್ಕೆ - ಲಿಂಗಾಯತ ಜಾತಿಯವರ ಜಮೀನು, ಅವರ ಹೆಸರು ಮರೆತು ಹೋಗಿರುತ್ತದೆ, ದಕ್ಷಿಣಕ್ಕೆ- ನಮ್ಮ ಅಣ್ಣ-ತಮ್ಮಂದಿರು ಜಮೀನು ಇರುತ್ತದೆ.

ಕಡೂರು ತಾಲ್ಲೂಕು, ಹಿರೆನಲ್ಲೂರು ಹೋಬಳಿ, ಚೌಳಹಿರಿಯೂರು ಗ್ರಾಮದ ಸರ್ವೆ ನಂ.330/1ರಲ್ಲಿರುವ 1 ಎಕರೆ 6 ಗುಂಟೆ ಪೈಕಿ 32 ಗುಂಟೆ ಪೂರ್ವಕ್ಕೆ-ಮಡಿವಾಳ ಮಲ್ಲೇಶ ಮತ್ತು ಮಾಡಾಳಪ್ಪನವರ ಸ್ವತ್ತು, ಪಶ್ಚಿಮಕ್ಕೆ-ಪಿ.ಸೋಮಪ್ಪನವರ ಸ್ವತ್ತು, ಉತ್ತರಕ್ಕೆ-ಸಿದ್ದಪ್ಪ ಮತ್ತು ಮಾಡಾಳಪ್ಪ ಮತ್ತು ಇತರರು ಸ್ವತ್ತು, ದಕ್ಷಿಣಕ್ಕೆ-ಮಣೆಯಜ್ಜರ ನಂಜುಂಡಪ್ಪನವರ ಮಗ ರೇಣುಕಪ್ಪನವರ ಸ್ವತ್ತು ಈ ಚಕ್ಕುಬಂದಿ ಇರುವ ಜಮೀನು ನಮ್ಮ ಕುಟುಂಬಕ್ಕೆ ಸೇರಿದ್ದೆ ಅಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತವಾಗಿದ್ದು ಅದನ್ನು ನನ್ನ ತಾಯಿಗೆ ಹೆಸರಿಗೆ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ನನ್ನ ತಂದೆ ಹಣ ಕೊಟ್ಟು ಕ್ರಯ ಪತ್ರವನ್ನು ಮಾಡಿಸಿಕೊಟ್ಟಿರುತ್ತಾರೆ. ನನ್ನ ತಾಯಿಯ ಹೆಸರಿಗಾದ ಕ್ರಯ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಕ್ರಯಪತ್ರದಲ್ಲಿ ನನ್ನ ತಂದೆ ಹಣ ಕೊಟ್ಟು ನನ್ನ ತಾಯಿಯ ಹೆಸರಿಗೆ ಕ್ರಯಪತ್ರವನ್ನು ಮಾಡಿಸಿಕೊಟ್ಟಿರುತ್ತಾರೆ ಎಂದು ನಮೂದು ಇರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರವನ್ನು ದಾವೆ ಹಾಕುವ ಮೊದಲು ನನ್ನ ತಾಯಿ ಕ್ರಯ ಮಾಡಿಸಿಕೊಂಡಿರುತ್ತಾರೆ.

ನನ್ನ ತಂದೆ ಸರ್ಕಾರಿ ಎಡೆಡ್ ಶಾಲೆಯಲ್ಲಿ ಸೇವಕನಾಗಿ ಕೆಲಸ ನಿರ್ವಹಿಸುತ್ತಿದ್ದರು ಎಂದರೆ ಸರಿ. ನನ್ನ ತಂದೆ ತನ್ನ ಹೆಂಡತಿಯ ಹೆಸರಿನಲ್ಲಿ ಸದರಿ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ಸರ್ಕಾರದಿಂದ ಅನುಮತಿ ಪಡೆದಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. 2005-2006 ನೇ ಸಾಲಿನಲ್ಲಿ ಸದರಿ ಸ್ವತ್ತನ್ನು ನನ್ನ ತಾಯಿಯ ಹೆಸರಿಗೆ ಖರೀದಿ ಮಾಡಿರುತ್ತಾರೆ. ಸದರಿ ಸ್ವತ್ತನ್ನು ನನ್ನ ತಂದೆಯವರ ದುಡಿಮೆಯಿಂದ ನನ್ನ ತಾಯಿಯ

ಹೆಸರಿಗೆ ಖರೀದಿಸಿದ್ದು ಸದರಿ ಸ್ವತ್ತು ನಮ್ಮ ಕುಟುಂಬದ ಸ್ವತ್ತಾಗಿರುವುದಿಲ್ಲ, ಅದು ಅವರ ಸರ್ಯಾರ್ಜಿತ ಸ್ವತ್ತಾಗಿರುತ್ತದೆ. ಸದರಿ ಸ್ವತ್ತು ನನ್ನ ತಂದೆಯವರು ಸ್ವಯಾರ್ಜಿತವಾಗಿ ಖರೀದಿಸಿದ ಸ್ವತ್ತು ಎಂದು ತೋರಿಸಲು ನಮ್ಮ ಬಳಿ ಕ್ರಯ ಪತ್ರ ಹಾಗೂ ಕುಟುಂಬದ ಆದಾಯ ದೃಢೀಕರಣ ಪತ್ರವಿರುತ್ತದೆ.

ದಿನಾಂಕ 11.05.2007 ರಲ್ಲಿ ಓಂಕಾರಪ್ಪನವರಿಂದ ನನ್ನ ತಂದೆಯವರು ನೇರವಾಗಿ 32 ಗುಂಟೆ ಜಮೀನನ್ನು ಸರ್ವೆ ನಂ.330/1 ರಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ನನ್ನ ತಾಯಿಯ ಹೆಸರಿಗೆ ಕ್ರಯಕ್ಕೆ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಚೌಳಹಿರಿಯೂರು ಗ್ರಾಮದ ಸರ್ವೆ ನಂ.314/1 ರಲ್ಲಿ ಒಟ್ಟು ವಿಸ್ತೀರ್ಣ 1 ಎಕರೆ 6 ಗುಂಟೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ-ನಾಗಪ್ಪ ಮತ್ತು ಚಂದ್ರಮ್ಮ, ಪಶ್ಚಿಮಕ್ಕೆ-ರೇವಣ್ಣ, ಉತ್ತರಕ್ಕೆ-ರೇವಣ್ಣಯ್ಯ, ದಕ್ಷಿಣಕ್ಕೆ-ದೋಣಪ್ಪ ನವರ ಜಮೀನು ಇದ್ದು, ಸದರಿ ಚಕ್ಕುಬಂದಿವುಳ್ಳ ಜಮೀನನ್ನು ನನ್ನ ತಾಯಿಯವರು ಕ್ರಯಕ್ಕೆ ಖರೀದಿಸಿದ ಸ್ವತ್ತಾಗಿರುತ್ತದೆ. ಸದರಿ ಸ್ವತ್ತು ಒಟ್ಟು ಕುಟುಂಬದ ಸ್ವತ್ತಾಗಿರುವುದಿಲ್ಲ. ನನ್ನ ತಾಯಿಯವರು ಗೃಹಿಣಿಯಾಗಿದ್ದರು. ನನ್ನ ತಾಯಿಗೆ ದುಡಿಮೆ ಇರಲಿಲ್ಲ, ಆದರೆ ನನ್ನ ತಂದೆಗೆ ದುಡಿಮೆ ಇತ್ತು. ಆ ಸಮಯದಲ್ಲಿ ನನ್ನ ತಂದೆಗೆ ವಾರ್ಷಿಕವಾಗಿ ರೂ.1,30,000/- ಸಂಬಳ ಬರುತ್ತಿತ್ತು. ಸಂಬಳ ಬಿಟ್ಟು ನನ್ನ ತಂದೆಗೆ ಬೇರೆ ಆದಾಯ ಇರಲಿಲ್ಲ ಎಂದರೆ ಸರಿ.

ಚೌಳಹಿರಿಯೂರು ಗ್ರಾಮದ ಸರ್ವೆ ನಂ.314/3 ರಲ್ಲಿ 1 ಎಕರೆ 21 ಗುಂಟೆ ಪೂರ್ವಕ್ಕೆ-ರಾಜಣ್ಣರವರ ಜಮೀನು, ಪಶ್ಚಿಮಕ್ಕೆ-ಮಲ್ಲೇಶಪ್ಪನವರ ಜಮೀನು, ಉತ್ತರಕ್ಕೆ-ಶಾಂತಯ್ಯನವರ ಜಮೀನು, ದಕ್ಷಿಣಕ್ಕೆ-ಶೇಖರಪ್ಪನವರ ಜಮೀನು ಈ ಚಕ್ಕುಬಂದಿವುಳ್ಳ ಸ್ವತ್ತನ್ನು ನನ್ನ ತಂದೆಯವರು ಸ್ವಯಾರ್ಜಿತವಾಗಿ ಖರೀದಿಸಿದ ಸ್ವತ್ತಾಗಿರುತ್ತದೆ. ಸದರಿ ಸ್ವತ್ತನ್ನು ನನ್ನ ತಂದೆಯವರು ಯಾವಾಗ, ಎಷ್ಟು ಹಣಕ್ಕೆ ಖರೀದಿಸಿರುತ್ತಾರೆ ಎಂದು ನನಗೆ ಮರೆತು ಹೋಗಿರುತ್ತದೆ. ಚೌಳಹಿರಿಯೂರು ಗ್ರಾಮದ ಸರ್ವೆ ನಂ.314/3 ರಲ್ಲಿ 20 ಗುಂಟೆ ಪೂರ್ವಕ್ಕೆ-ಮಲ್ಲೇಲಿಂಗಪ್ಪನವರ ಜಮೀನು, ಪಶ್ಚಿಮಕ್ಕೆ-ಹೀರಣ್ಣನವರ ಜಮೀನು, ಉತ್ತರಕ್ಕೆ-ಅಜ್ಜಯ್ಯ ಒಡೆಯರ್ ರವರ ಜಮೀನು, ದಕ್ಷಿಣಕ್ಕೆ-ಸಿದ್ದರಾಮಪ್ಪನವರ ಜಮೀನು ಈ ಚಕ್ಕುಬಂದಿವುಳ್ಳ ಸ್ವತ್ತನ್ನು ನನ್ನ ತಂದೆಯವರು ಸ್ವಯಾರ್ಜಿತವಾಗಿ ಖರೀದಿಸಿದ ಸ್ವತ್ತಾಗಿರುತ್ತದೆ. ಸದರಿ ಸ್ವತ್ತನ್ನು ನನ್ನ ತಂದೆಯವರು ಯಾವಾಗ, ಎಷ್ಟು ಹಣಕ್ಕೆ

ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಹೊಸದುರ್ಗ ತಾಲ್ಲೂಕು, ಕಸಬಾ ಹೋಬಳಿ, ಬಾಗಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ.42/1ರಲ್ಲಿ 4 ಎಕರೆ 15 ಗುಂಟೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ-ಬೋಗಪ್ಪನವರ ಜಮೀನು, ಪಶ್ಚಿಮಕ್ಕೆ-ವೇದಾವತಿ ನದಿ, ಉತ್ತರಕ್ಕೆ-ಮರಿಯಪ್ಪನವರ ಜಮೀನು, ದಕ್ಷಿಣಕ್ಕೆ-ವೇದಾವತಿ ನದಿ ಈ ಚಕ್ಕುಬಂದಿವುಳ್ಳ ಸ್ವತ್ತನ್ನು ನನ್ನ ತಂದೆಯವರು ಸ್ವಯಾರ್ಜಿತವಾಗಿ ಖರೀದಿಸಿ ಅದನ್ನು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಸ್ವತ್ತನ್ನು ನನ್ನ ತಂದೆಯವರು ಯಾವಾಗ, ಎಷ್ಟು ಹಣಕ್ಕೆ ಖರೀದಿಸಿ, ಎಷ್ಟು ಹಣಕ್ಕೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ದಾವಾ ಐಟಂ ನಂ.1ರ ಸರ್ವೆ ನಂ.37ಕ್ಕೆ ಸಂಬಂಧಿಸಿದಂತೆ 20ಗುಂಟೆ ಸ್ವತ್ತನ್ನು ಪೂರ್ವಕ್ಕೆ-ನಂಜಪ್ಪನವರ ಮಗ ರಂಗಪ್ಪನವರ ಹಿಸ್ಸೆ ಜಮೀನು, ಪಶ್ಚಿಮಕ್ಕೆ-ವೆಂಕಟಪ್ಪನವರ ಮಗ ನಂಜುಂಡಪ್ಪನವರ ಹಿಸ್ಸೆ ಜಮೀನು, ಉತ್ತರಕ್ಕೆ-ಗೌಡ್ರು ಶಿವಮೂರ್ತಪ್ಪನವರ ಜಮೀನು, ದಕ್ಷಿಣಕ್ಕೆ-ಬೂದಿಹಾಳ್ ಕಲ್ಲಪ್ಪನವರ ಜಮೀನು ಈ ಚಕ್ಕುಬಂದಿವುಳ್ಳ ಸ್ವತ್ತು ನಮ್ಮ ಕುಟುಂಬಕ್ಕೆ ಸೇರಿದ್ದಾಗಿರುವುದಿಲ್ಲ. ಸರ್ವೆ ನಂ.188/1ರಲ್ಲಿ 9 ಗುಂಟೆ ಖುಷ್ಕಿ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ-ವೆಂಕಟಪ್ಪನವರ ಮಗ ನಂಜುಂಡಪ್ಪನವರ ಹಿಸ್ಸೆ ತೋಟ, ಪಶ್ಚಿಮಕ್ಕೆ-ಕ್ರಯದಾರರಾದ ಕೆಂಚಮ್ಮನವರ ತೋಟ, ಉತ್ತರಕ್ಕೆ-ಮೂಡಲಪ್ಪನವರ ಹಿಸ್ಸೆ ಜಮೀನು, ದಕ್ಷಿಣಕ್ಕೆ-ಕೆಂಚಮ್ಮನವರ ತೋಟ ಈ ಚಕ್ಕುಬಂದಿವುಳ್ಳ ಸ್ವತ್ತು ನಮ್ಮ ಕುಟುಂಬಕ್ಕೆ ಸೇರಿದ್ದೋ ಅಲ್ಲವೋ ಎಂದು ನನಗೆ ಗೊತ್ತಿಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.